ಸಿನಿಮಾ ಸಾಹಿತ್ಯದ ಬಗ್ಗೆ ಮಾತನಾಡುತ್ತಾ 'ಒಂದು ಸಿಟ್ಟಿಂಗ್‌ನಲ್ಲಿ ಕುಳಿತರೆ ನಾವು ಬರೆಯಬೇಕೆಂದುಕೊಂಡ ನಾಲ್ಕೆಂಟು ಕಥೆಗಳು ಒಂದು ಸಿನಿಮಾಗಾಗಿ ಖರ್ಚಾಗಿ ಬಿಡುತ್ತವೆ' ಎನ್ನುತ್ತಿದ್ದರು.

'ಪರೋಪಕಾರಂ ಇದಂ ಸಾಹಿತ್ಯಂ' ಎಂದು ನಂಬಿದ್ದ ಶ್ರೀರಮಣ 'ರಸಾಸ್ವಾದನೆಯೇ ಸಾಹಿತ್ಯದ ಮೊದಲ ಲಕ್ಷಣ' ಎನ್ನುತ್ತಿದ್ದರು. ಶ್ರೀರಮಣರು ತೆಲುಗಿನಲ್ಲಿ 'ಪೇರಡಿ' ಲೇಖಕರಾಗಿ ಸುಪ್ರಸಿದ್ಧರು. ಅನೇಕ ಖ್ಯಾತ ಲೇಖಕರ ಶೈಲಿಗಳನ್ನು ಅನುಕರಣೆ ಮಾಡುತ್ತಾ ನೂರಾರು 'ವಿಡಂಬನೆ'ಗಳನ್ನು ಬರೆದಿದ್ದಾರೆ. ಇವರ ಶ್ರೀಕಾಲಮ್, ಶ್ರೀಚಾನಲ್, ಹಾಸ್ಯಜ್ಯೋತಿ ಅತ್ಯಂತ ಜನಪ್ರಿಯ ಪತ್ರಿಕಾ ಶೀರ್ಷಿಕೆಗಳು. ಇವರ ಮೊದಲ ಕಥೆ 'ವೆಲುಗು ತಗ್ಗನಿ ವಜ್ರಂ' 1970ರಲ್ಲಿ ಪ್ರಕಟಗೊಂಡಿತ್ತು. ಸುಧೀರ್ಘ ವಿರಾಮದ ನಂತರ 'ಬಂಗಾರು ಮುರುಗು' ಕಥೆಯನ್ನು ಬರೆದಿದ್ದರು. ಶ್ರೀರಮಣ ಸುಮಾರು ವರ್ಷ 'ಆಂಧ್ರಜ್ಯೋತಿ' ಮತ್ತು 'ನವ್ಯ' ವಾರಪತ್ರಿಕೆಗಳಿಗೆ ಸಂಪಾದಕರಾಗಿ ಕೆಲಸ ಮಾಡಿದ್ದರು. 'ಪತ್ರಿಕೆ' ಎಂಬ ಪತ್ರಿಕೆಗೆ ಗೌರವ ಸಂಪಾದಕರಾಗಿಯೂ ಕೆಲಸ ಮಾಡಿದ್ದರು. ಅವರು ಬರೆದ 'ಬಂಗಾರದ ಕಡಗ' ಕಥೆ ಆಂಧ್ರಜ್ಯೋತಿಯಲ್ಲಿ ಪ್ರಕಟಗೊಂಡಾಗ ಮಹಾನ್ ಸಂಚಲನವನ್ನೇ ಉಂಟು ಮಾಡಿತ್ತು. ಆ ಕಥೆಯನ್ನು ಮೆಚ್ಚಿಕೊಂಡು 800 ಪತ್ರಗಳು ಬಂದಿದ್ದವು. 'ಮಿಥುನಂ' 'ಸೋಡಾನಾಯುಡು' 'ಧನಲಕ್ಷ್ಮಿ' ಕಥೆಯ ಪಾತ್ರಗಳು ಓದುಗರನ್ನು ಎಷ್ಟೋ ವರ್ಷಗಳು ಕಾಡಿದ್ದವು.

ಶ್ರೀರಮಣರ ಮನಸ್ಸಿನಲ್ಲಿ ಬಾಲ್ಯದಿಂದಲೂ ನಾಟಿದ್ದ ಕಲ್ಪನೆಯನ್ನು ಅಕ್ಷರ ರೂಪದಲ್ಲಿ 'ಮಿಥುನಂ'ಕಥೆಯಾಗಿ ರಚಿಸಿದ್ದರು. 'ಮಿಥುನಂ' ತೆಲುಗಿನ ಖ್ಯಾತ ಚಿತ್ರಕಲಾವಿದರಾದ ಬಾಪು ಅವರನ್ನು ಎಷ್ಟು ಮೋಡಿಗೊಳಿಸಿತ್ತೆಂದರೆ ಅವರು ಇಡೀ ಕಥೆಯನ್ನು ತಮ್ಮ ವಿಶೇಷ ಕೈಬರಹದಲ್ಲಿ ಬರೆಯುವಷ್ಟು. ಅಮೇರಿಕದ ಸೈಕಿಯಾಟ್ರಿಸ್ಟ್ ಮತ್ತು ಲೇಖಕ ಡಾ.ಜಂಪಾಲ ಅವರು ಬಾಪು ಕೈ ಬರಹದ 'ಮಿಥುನಂ' ಕಥೆಯನ್ನು ಪ್ರಕಟಿಸಿ ನಾಲ್ಕು ಲಕ್ಷ ಪ್ರತಿಗಳನ್ನು ಓದುಗರಿಗೆ ತಲುಪಿಸಿದ್ದಾರೆ.

ಧರ್ಮದ ಹೆಸರಿನಲ್ಲಿ ನಡೆಯುವ ಅಸಮಾನತೆಯನ್ನು, ಅರಾಜಕತೆಯನ್ನು ತಮ್ಮ ಕಥೆಗಳ ಮೂಲಕ, ಪಾತ್ರಗಳ ಮೂಲಕ ಖಂಡಿಸುತ್ತಿದ್ದರು. ಆಚಾರ, ನಂಬಿಕೆಗಳಿಗಿಂತ, ಮಾನವೀಯತೆಯೇ ಶ್ರೇಷ್ಠವೆಂದು ಪ್ರತಿಪಾದಿಸುವ 'ಬಂಗಾರದ ಕಡಗ' ಕಥೆಯಲ್ಲಿ ಅಜ್ಜಿಯೊಬ್ಬಳು ಸ್ವಾಮೀಜಿಯನ್ನು ತರಾಟೆಗೆ ತೆಗೆದುಕೊಳ್ಳುವ ಘಟನೆ ಓದುಗರನ್ನು ಯೋಚನೆಗೀಡು ಮಾಡುತ್ತದೆ. 'ಬಾಳೆಹೂ' ಸ್ವಾಮಿಯ ಪಾತ್ರದ ಮೂಲಕ ವಾಸ್ತವಕ್ಕೆ ಕನ್ನಡಿ ಹಿಡಿಯುತ್ತಾರೆ.

ಸದಾ ತಮಾಷೆ ಮತ್ತು ಆರೋಗ್ಯಕರ ಹಾಸ್ಯ, ಸೆಟೈರ್‌ಗಳಿಂದ ಮಾತನಾಡುತ್ತಿದ್ದ ಶ್ರೀರಮಣರು 'ಸಾಹಿತ್ಯ ಸಭೆಗಳಲ್ಲಿ ಯಾವುದೇ ಮುನ್ಸೂಚನೆ ನೀಡದೇ ಹೆಚ್ಚು ಬೋರ್ ಹೊಡೆಸಿ ಕೊರೆಯುವವರಿಗಿಂತ, 'ಜಾಸ್ತಿ ಮಾತಾಡುವುದಿಲ್ಲ' ಎನ್ನುತ್ತಲೇ ಕಿಸೆಯಿಂದ ಚಿಕ್ಕ ಚಿಕ್ಕ ಚೀಟಿಗಳನ್ನು ಹೊರ ತೆಗೆಯುವವರು ಅತ್ಯಂತ ಅಪಾಯಕಾರಿಗಳು' ಎನ್ನುತ್ತಿದ್ದರು.

ಉದಯೋನ್ಮುಖ ಯುವ ಲೇಖಕರೊಬ್ಬರ ಪುಸ್ತಕಕ್ಕೆ 'ಮುನ್ನುಡಿ' ಬರೆಯುತ್ತಾ 'ನಾವೊಂದು ಪುಸ್ತಕವನ್ನು ಪ್ರಕಟಣೆಗೆ ಕೊಡುತ್ತಿದ್ದೇವೆಂದರೆ ಒಂದು ಬಿದಿರಿನ ಪೊದೆಯನ್ನು ಇಡಿಯಾಗಿ ನಾಶ ಮಾಡಲು ಹೊರಟಿದ್ದೇವೆಂದು ಅರ್ಥ. ಬಿದಿರಿನ ಗಿಡ ಜೀವಂತವಿರಬೇಕೆ ಅಥವಾ ನಿಮ್ಮ ಪುಸ್ತಕ ಹೊರ ಬರಬೇಕೆ ಎಂಬುದನ್ನು ನಿಮ್ಮ ಬುದ್ಧಿವಂತಿಕೆಗೆ ಬಿಡುತ್ತಿದ್ದೇನೆ' ಎಂದರಂತೆ.

ಶ್ರೀರಮಣರ ಮತ್ತೊಂದು ಕಾದಂಬರಿ 'ನಾಲ್ಕನೇ ಎಕರೆ' ಯನ್ನು ಯುವಲೇಖಕ ಅಜಯ್‌ವರ್ಮ ಕನ್ನಡಕ್ಕೆ ಅನುವಾದಿಸಿದ್ದು, ಛಂದ ಪುಸ್ತಕ ಪ್ರಕಾಶನ ಪ್ರಕಟಿಸಿದೆ. ಜಾಗತೀಕರಣದಿಂದ ಕಂಪನಿಗಳ ಪಾಲಾಗುವ ರೈತರ ಕೃಷಿ ಭೂಮಿ ಸಮಸ್ಯೆಯನ್ನು ಮುಖ್ಯವಾಗಿಟ್ಟುಕೊಂಡು ರಚಿಸಿರುವ ಈ ಪುಸ್ತಕಕ್ಕೆ ಪೂರಕ ರೇಖಾ ಚಿತ್ರಗಳನ್ನು ಬರೆಯುವ ಅವಕಾಶ ನನಗೆ ಬಂದಿತ್ತು. ನನ್ನ ಅಸಂಗತ ಶೈಲಿ ರೇಖಾ ಚಿತ್ರಗಳ ಪ್ರಯಾಣದಲ್ಲಿ ಈ ನೈಜ ಚಿತ್ರಗಳ ರಚನೆ ನಿಜಕ್ಕೂ ಚಾಲೆಂಜಿಗ್ ಆಗಿತ್ತು. ಈ ನೆಪದಲ್ಲಿ ಪುಸ್ತಕವನ್ನು ಆಳವಾಗಿ ಮತ್ತೆ ಮತ್ತೆ ಓದಲು ಸಾಧ್ಯವಾಗಿತ್ತು. ತೆಲುಗಿನಷ್ಟೇ ಕನ್ನಡದಲ್ಲೂ ಹೆಸರು ಮಾಡಿದ್ದ ಅಪರೂಪದ ಲೇಖಕ ಶ್ರೀರಮಣ ಇಂದು ನಮ್ಮೊಂದಿಗಿಲ್ಲ. ಅವರ 'ಮಿಥುನಂ' ಕಥಾ ಸಂಕಲನವನ್ನು ಕನ್ನಡದ ಓದುಗರು ಮರೆಯುವಂತಿಲ್ಲ. ಜೊತೆಯಲ್ಲಿಯೇ ಅವರ ಕಥೆ 'ಸಿಂಹಾಚಲ ಸಂಪಿಗೆ' ನಾಟಕವಾಗಿ 25 ನೇ ಪ್ರದರ್ಶನ ಕಾಣುತ್ತಿದೆ. ●